


ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಕಿರನಲ್ಲಿಯಲ್ಲಿನ ಘನ ತ್ಯಾಜ್ಯ ಸಂಸ್ಕರಣಾ ಘಟಕ

ವಾತಾವರಣದ ಮೇಲೆ ಯಾವ ಪ್ರತಿಕೂಲ ಪರಿಣಾಮವೂ ಆಗುತ್ತಿಲ್ಲ ಎಂಬ ಮಾಹಿತಿ ಇದೆ. ಇದು ನಿಜವಾಗಿದ್ದರೆ ಸರ್ಕಾರದ ಪ್ರಯತ್ನಕ್ಕೆ ಶಹಭಾಸ್‌ಗಿರಿ ನೀಡಲೇಬೇಕು.

### ಬಿಡದಿಯ ‘ವೇಸ್ಟ್ ಟು ಎನರ್ಜಿ’

ಬೆಂಗಳೂರಿನ ಘನತ್ಯಾಜ್ಯಕ್ಕೆ ಮುಕ್ತಿ ನೀಡಲು ಬಿಡದಿಯ ಬಳಿ ಸ್ಥಾಪಿಸಲಾಗಿರುವ ‘ವೇಸ್ಟ್ ಟು ಎನರ್ಜಿ’ ಘಟಕವು ದಿನವೊಂದಕ್ಕೆ 600 ಟನ್ ಕಸ ಬಳಸಿಕೊಂಡು ಪ್ರತಿದಿನ 11.5 ಮೆಗಾ ವ್ಯಾಟ್ ವಿದ್ಯುತ್ ಶಕ್ತಿ ಉತ್ಪಾದಿಸುವ ಕ್ಷಮತೆ ಪಡೆದಿದೆ. ಈಗಾಗಲೇ 50,000 ಟನ್‌ಗಿಂತ ಹೆಚ್ಚು ಕಸದಿಂದ ವಿದ್ಯುತ್ ಶಕ್ತಿ ಉತ್ಪಾದಿಸಲಾಗಿದೆ. 15 ಎಕರೆ ಜಾಗದಲ್ಲಿ ನಿರ್ಮಾಣಗೊಂಡಿರುವ ಈ ಘಟಕಕ್ಕೆ ಬೇಕಾದ ನೀರನ್ನು ಘಟಕದ ಆವರಣದಲ್ಲಿರುವ 10 ಕೊಳವೆಬಾವಿಗಳು ಪೂರೈಸುತ್ತಿವೆ. ವಿದ್ಯುತ್ ಉತ್ಪಾದನೆ ಹಂತದಲ್ಲಿ ಪ್ರತಿ ಗಂಟೆಗೆ 40 ಟನ್ ನೀರು ಬಳಕೆಗೊಳ್ಳುತ್ತಿದೆ ಮತ್ತು 36 ಟನ್‌ನಷ್ಟು ನೀರು ರೀಸೈಕಲ್ ಆಗುತ್ತದೆ.

ಘಟಕದಲ್ಲಿ ಘನ ಕಸ ಸುಟ್ಟು ಹೊಮ್ಮುವ ಬಿಸಿಯಿಂದ ನೀರನ್ನು ಕಾಯಿಸಿ, ನೀರಿನ ಆವಿಯನ್ನು ಟರ್ಬೈನ್‌ಗಳಿಗೆ ಹಾಯಿಸಿದಾಗ ಉತ್ಪಾದನೆಯಾಗುವ ವಿದ್ಯುತ್ತನ್ನು ಎರಡು ಲಕ್ಷ ಮನೆಗಳಿಗೆ ಸರಬರಾಜು ಮಾಡಬಹುದು. ಉತ್ಪತ್ತಿಯಾಗುವ ಬೂದಿಯನ್ನು ಬಿಬಿಎಂಪಿಗೆ ನೀಡಲಾಗುತ್ತಿದ್ದು ಅದರ ವೈಜ್ಞಾನಿಕ ವಿಲೇವಾರಿಗೂ ಸಿದ್ಧತೆಗಳು ನಡೆದಿವೆ. ಬೆಂಗಳೂರು ನಗರದಲ್ಲಿ ಪ್ರತಿ ದಿನ 6000 ಟನ್ ಕಸ ಉತ್ಪತ್ತಿಯಾಗುತ್ತದೆ. ಅದರಲ್ಲಿ 2000 ಟನ್ ಘನ ಕಸವೇ ಇರುತ್ತದೆ. ನಗರದ ಶೇ. 25ರಷ್ಟು ಕಸವನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಗುರಿಯೂ ಘಟಕಕ್ಕೆ ಇದೆ. ಇದೇ ಮಾದರಿಯ ಹತ್ತಾರು ಘಟಕಗಳು ಸ್ಥಾಪನೆಗೊಂಡಲ್ಲಿ ಬೆಂಗಳೂರಿನ ಕಸಕ್ಕೆ ಸಂಪೂರ್ಣ ಮುಕ್ತಿ ನೀಡಬಹುದು, ಜೊತೆಗೆ ಅಪಾರ ಪ್ರಮಾಣದ ವಿದ್ಯುತ್ತನ್ನು ಉತ್ಪಾದಿಸಬಹುದು.

### ಕಸವನ್ನು ಶಕ್ತಿಯನ್ನಾಗಿಸುವ ಮದ್ರಾಸ್ ಐಐಟಿ

ಮದ್ರಾಸ್ ಐಐಟಿಯು ದಿನಕ್ಕೆ ಒಂದು ಟನ್ ಘನ ಕಸವನ್ನು ಆವಿ ರೂಪದ ಶಕ್ತಿಯನ್ನಾಗಿ ಪರಿವರ್ತಿಸುವ ರೋಟರಿ ಫರ್ನೇಸ್ ಘಟಕ ಸಿದ್ಧಪಡಿಸಿ ತಿರುಚಿನಾಪಳ್ಳಿ ನಗರದ ಬಿಎಚ್‌ಇಎಲ್ ಕ್ಯಾಂಪಸ್‌ನಲ್ಲಿ ಸ್ಥಾಪಿಸಿ ಕಾರ್ಯನಿರ್ವಹಿಸುತ್ತಿದೆ.

ಫಿಲಿಪ್ಪೀನ್ಸ್‌ನಲ್ಲಿ ಬೋರ್‌ವೆಲ್ ಪೈಪುಗಳನ್ನೇ ಬಳಸಿ ಕಸದಿಂದ ನೇರವಾಗಿ ಮೀಥೇನ್ ಅನಿಲ ಪಡೆದು ಅಡುಗೆಮನೆಗಳಲ್ಲಿ ಬಳಸಲಾಗುತ್ತದೆ.

ರೀಸೈಕಲಿಂಗ್‌ಗೆ ಬೇಕು. ರೀಸೈಕಲ್ ಮಾಡಲು ಸಾಕಷ್ಟು ತಂತ್ರಜ್ಞಾನ ಘಟಕ ಮತ್ತು ವಿದ್ಯುತ್ ಇದೆ ಎಂದುಕೊಳ್ಳೋಣ. ಅಷ್ಟಕ್ಕೆ ಕೆಲಸ ಆಗಿಬಿಡುತ್ತದೆಯೇ? ರೀಸೈಕಲ್ ಪ್ರಕ್ರಿಯೆಯಲ್ಲಿ ಪ್ರಾಕೃತಿಕ ಅನನುಕೂಲಗಳಿಲ್ಲವೆ? ಶಾಖವರ್ಧಕ ಅನಿಲಗಳು ವಾತಾವರಣಕ್ಕೆ ಹೊಮ್ಮುವುದಿಲ್ಲವೇ?

### ಬಹು ಬೇಡಿಕೆಯ ಕಸ ‘ಸಂಪನ್ಮೂಲ’

ಜಗತ್ತಿನಾದ್ಯಂತ ಕಸಕ್ಕೆ ದೊಡ್ಡ ಬೇಡಿಕೆ ಇದೆ ಎಂಬುದು ನಿಮಗೆ ಗೊತ್ತಾ? ಅಚ್ಚರಿ ಎಂದರೆ ಭೂಮಿಯ ದಕ್ಷಿಣದ ದೇಶಗಳಲ್ಲಿ ಅಗತ್ಯವಿರುವಷ್ಟು ಮತ್ತು ಸ್ಥಳೀಯ ಬೇಡಿಕೆ ಪೂರೈಸುವಷ್ಟು ಕಸವೇ ಇಲ್ಲ!

ಪಾಶ್ಚಿಮಾತ್ಯ ದೇಶಗಳು ತಮ್ಮ ಎಲ್ಲ ಬಗೆಯ ಕಸವನ್ನು ಭೂಗೋಳದ ಬಡ ರಾಷ್ಟ್ರಗಳಿಗೆ ಲಾಗಾಯಿತಿನಿಂದಲೂ ಕಳಿಸುತ್ತಿವೆ. ಚೀನಾ ದೇಶವು ತಾಮ್ರ, ಉಕ್ಕು ಅಲ್ಯುಮಿನಿಯಂ, ಕಾಗದ ಮತ್ತು ಪ್ಲಾಸ್ಟಿಕ್ ಕಸವನ್ನು ಬೇರೆಡೆಯಿಂದ ಆಮದು ಮಾಡಿಕೊಂಡು ತನ್ನ ಎಲೆಕ್ಟ್ರಾನಿಕ್ಸ್ ಉದ್ಯಮಗಳಲ್ಲಿ ಬಳಸಲು ಶುರು ಮಾಡಿತು. ಕೆಲವೇ ವರ್ಷಗಳಲ್ಲಿ ‘ಎಲೆಕ್ಟ್ರಾನಿಕ್ಸ್ ದೈತ್ಯ’ನಾಗಿ ಬೆಳೆಯಿತು. ತರಿಸಿಕೊಂಡ ಕಸವನ್ನು ರೀಸೈಕಲ್ ಮಾಡಿ ಅಪಾರ ಹಣವನ್ನೂ ಗಳಿಸಿತು. ಆರ್ಥಿಕ ಅಭಿವೃದ್ಧಿಯ ಧಾವಂತಕ್ಕೆ ಬಿದ್ದು ತನ್ನ ಪರಿಸರವನ್ನೇ ಬಲಿ ಕೊಟ್ಟಿತ್ತು. ರೀಸೈಕಲ್ ಪ್ರಕ್ರಿಯೆಗಳಿಂದಾಗಿ ದೇಶದ ನೀರು ಮತ್ತು ನೆಲ ಎರಡೂ ಮಲಿನಗೊಂಡಿದ್ದವು. ಚೀನಾದ ಶೇ. 81ರಷ್ಟು ಎಳೆಯ ಮಕ್ಕಳ ರಕ್ತದಲ್ಲಿ ಸೀಸದ ವಿಷ ಇರುವುದು ಪತ್ತೆಯಾಯಿತು. ಇದು ಅಪಾಯಕಾರಿ ಎಂದು ತಿಳಿದ ತಕ್ಷಣ ಚೀನಾ ಎಲ್ಲ ಬಗೆಯ ಕಸದ ಆಮದನ್ನು ನಿಲ್ಲಿಸಿಬಿಟ್ಟಿತು.

ಭಯೋತ್ಪಾದಕ ಕೃತ್ಯದಿಂದಾಗಿ ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್‌ನ ಕಟ್ಟಡಗಳು ನೆಲಸಮವಾದಾಗ ಅದರಿಂದ ಹೊಮ್ಮಿದ ಬೆಲೆಬಾಳುವ ಉಕ್ಕು, ಅಲ್ಯುಮಿನಿಯಂ ಲೋಹ, ಪಿವಿಸಿ ಪೈಪ್, ಗಾಜು, ಫೈಬರ್ ಗ್ಲಾಸ್, ಕರಗಿದ ಪ್ಲಾಸ್ಟಿಕ್‌ಗಳನ್ನು ಟನ್‌ಗಟ್ಟಲೆ ದೊಡ್ಡ ದೊಡ್ಡ ಹಡಗುಗಳ ಮೂಲಕ ನಾವೇ ತರಿಸಿಕೊಂಡಿದ್ದೆವು. ಒಂದೊಂದನ್ನು ಬೇರ್ಪಡಿಸಿ ಕೆಲವನ್ನು ಇಡಿಯಾಗಿ, ಇನ್ನೂ ಕೆಲವನ್ನು ಮೂಟೆಗಟ್ಟಲೆ ಮಾರಿ ಹೆಚ್ಚಿನ ಲಾಭ ಮಾಡಿಕೊಂಡೆವು.

ಚೀನಾದ ನಡೆಯನ್ನು ಹಿಂಬಾಲಿಸಿದ ಮಲೇಷ್ಯಾ, ವಿಯೆಟ್ನಾಂ, ಥಾಯ್ಲೆಂಡ್ ಮತ್ತು ನಾವು ಪ್ಲಾಸ್ಟಿಕ್ ತ್ಯಾಜ್ಯದ ವಿಚಾರದಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮಕ್ಕೆ ಮುಂದಾದೆವು. ಕೆಲ ಬಗೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದೆವು. ಆದರೆ ಇದು ಕೆಲಸ

### ‘ಮೈಕ್ರೊ’ ಪ್ಲಾಸ್ಟಿಕ್‌ನ ‘ಮೆಗಾ’ ಸಮಸ್ಯೆ

ಮಾನವರ ರಕ್ತದಲ್ಲಿ ಮೈಕ್ರೋ ಪ್ಲಾಸ್ಟಿಕ್ ಕಣಗಳು ಇರುವುದು ಪತ್ತೆಯಾಗಿ ವರ್ಷಗಳೇ ಆಗಿವೆ. 5 ಮಿಲಿ ಮೀಟರ್‌ಗಿಂತ ಕಡಿಮೆ ಗಾತ್ರದ ಪ್ಲಾಸ್ಟಿಕ್ ಅನ್ನು ಮೈಕ್ರೋ ಪ್ಲಾಸ್ಟಿಕ್ ಎನ್ನುತ್ತೇವೆ.

ನಾವು ಸೇವಿಸುವ ಉಪ್ಪು, ಸಕ್ಕರೆ, ಗಜ್ಜರಿ, ಸೇಬು, ಅಕ್ಕಿ, ಶೇಂಗಾ, ಬ್ರೊಕೊಲಿ, ಜೇನುತುಪ್ಪ, ಮೂಲಂಗಿ, ಸೊಪ್ಪು, ಏಡಿ, ಪ್ರಾನ್ಸ್, ಚಿಕನ್, ಮೀನು ಮತ್ತು ಕುಡಿಯುವ ಚಹಾ, ಬಿಯರ್, ವೈನ್‌ಗಳಲ್ಲೆಲ್ಲ ಪ್ರವೇಶಿಸಿದೆ. ಇಟಲಿಯ ಆಹಾರ ಸಂಶೋಧಕರು ಒಂದು ಸೇಬಿನಲ್ಲಿ ಎರಡು ಲಕ್ಷ ಮೈಕ್ರೊ ಪ್ಲಾಸ್ಟಿಕ್ ಪದಾರ್ಥವನ್ನು ಪತ್ತೆಹಚ್ಚಿದ್ದಾರೆ. ಒಂದು ಗ್ರಾಂ ಉಪ್ಪಿನಲ್ಲಿ 115, ಒಂದು ಲೀಟರ್ ಬಾಟಲಿ ನೀರಿನಲ್ಲಿ 700 ರಿಂದ 800 ಮೈಕ್ರೋ ಪ್ಲಾಸ್ಟಿಕ್ ಕಣಗಳು ಪತ್ತೆಯಾಗಿದ್ದು, ವಾರಕ್ಕೆ 5ರಿಂದ 10 ಗ್ರಾಂ ಮೈಕ್ರೋ ಪ್ಲಾಸ್ಟಿಕ್ ನಮ್ಮ ದೇಹ ಸೇರುತ್ತಿದೆ. ಅದರಲ್ಲಿನ ರಾಸಾಯನಿಕಗಳು ಮೆದುಳು, ಮೂತ್ರ ಜನಕಾಂಗ, ಯಕೃತ್ತುಗಳ ಮೇಲೆ ಪರಿಣಾಮ ಉಂಟುಮಾಡುವುದಲ್ಲದೆ ಮಹಿಳೆ–ಪುರುಷ ಇಬ್ಬರಲ್ಲೂ ಬಂಜೆತನ ತರಬಲ್ಲವು ಎಂಬುದು ಅಧ್ಯಯನಗಳಿಂದ ತಿಳಿದಿದೆ. ಹಾರ್ಮೋನ್ ಅಸಮತೋಲನ, ಡಿಎನ್‌ಎ ಗಾಸಿ, ಉರಿಯೂತ, ಭ್ರೂಣ ಬೆಳವಣಿಗೆಯ ನ್ಯೂನತೆಗಳಿಗೂ ಮೈಕ್ರೊ ಪ್ಲಾಸ್ಟಿಕ್ ಕಾರಣವಾಗುತ್ತಿದೆ.